Date | Particulars | F. No. | Rs. | Ps.

ಶ್ರೀ ಜಡೇ ಶಂಕರಲಿಂಗ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್

ನಂ. 3431/ಒ, ಮೊದಲನೆ ಮಹಡಿ, 7ನೇ ಮುಖ್ಯರಸ್ತೆ, ಸುಬ್ಬಣ್ಣ ಗಾರ್ಡನ್, ವಿಜಯನಗರ,
ಬೆಂಗಳೂರು-560 040. ದೂರವಾಣಿ : -080-23145994
ಇ-ಮೇಲ್- sjssccl@gmail.com, ವೆಬ್‌ಸೈಟ್ : www.sjssccl.co.in

2023-24 ನೇ ಸಾಲಿನ 11ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ

ಮಾನ್ಯ ಸದಸ್ಯರೆ,

ನಮ್ಮ ಸಹಕಾರಿಯ 2023-24 ನೇ ಸಾಲಿನ 11ನೇ ಸರ್ವ ಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಕೆ. ಹಂಪಾಗೋಳ್, ಇವರ ಅಧ್ಯಕ್ಷತೆಯಲ್ಲಿ ದಿನಾಂಕ **15/09/2024**ರ ಭಾನುವಾರ ಬೆಳಿಗ್ಗೆ **11 ಘಂಟೆಗೆ ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ಬೆಂಗಳೂರು.** ಇಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಸಭೆಗೆ ಸಕಾಲಕ್ಕೆ ಸರಿಯಾಗಿ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು, ಆಡಳಿತ ಮಂಡಳಿ ಪರವಾಗಿ ಕೋರುತ್ತೇನೆ.

ಕಾರ್ಯಸೂಚಿ

1) ಪ್ರಾರ್ಥನೆ
2) ಸಂತಾಪ ಸೂಚನೆ.
3) ಸ್ವಾಗತ - ಅಧ್ಯಕ್ಷರಿಂದ
4) 11ನೇ ಸರ್ವ ಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಓದಿ ದಾಖಲಿಸುವುದು
5) 10ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವುದು.
6) 2023-24 ನೇ ಸಾಲಿನ ಆಡಳಿತ ವರದಿಯನ್ನು ಓದಿ ಅಂಗೀಕರಿಸುವುದು.
7) 2023-24 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಶ್ರೀ ಮಹದೇವ ಸಿ. ಎಂ., ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು, ಇವರು ಲೆಕ್ಕ ಪರಿಶೋಧನೆ ಮಾಡಿ ವರದಿ ಸಲ್ಲಿಸಿರುವುದನ್ನು ಅಂಗೀಕರಿಸುವುದು ಹಾಗೂ ಅವರು ಗಮನಿಸಿದ ಅಂಶಗಳಿಗೆ ಪಾಲನಾ ವರದಿ ಪರಿಗಣಿಸುವುದು.
8) 2023-24 ನೇ ಸಾಲಿನ ಮಂಜೂರಾದ ಅಂದಾಜು ಆಯವ್ಯಯದಲ್ಲಿ ಹೆಚ್ಚಿಗೆ ಖರ್ಚಾಗಿರುವ ಪದ್ದುಗಳಿಗೆ ಮಂಜೂರಾತಿ ನೀಡುವುದು.
9) 2023-24 ನೇ ಸಾಲಿನ ಲಾಭಾಂಶವನ್ನು ಉಪವಿಧಿ 79 ರ ಪ್ರಕಾರ ಹಂಚಿಕೆ ಮಾಡುವುದು
10) 2024-25 ನೇ ಸಾಲಿಗೆ ಮುಂಗಡ ಪತ್ರ (ಬಡ್ಜೆಟ್) ಮಂಜೂರು ಮಾಡುವುದು.
11) 2024-25 ನೇ ಸಾಲಿಗೆ ಸನ್ನದು ಲೆಕ್ಕ ಪರಿಶೋಧಕರನ್ನು ನಿಯಮಿಸುವುದು ಹಾಗೂ ಅವರ ಸಂಭಾವನೆ ಮಂಜೂರು ಮಾಡುವುದು.
12) 2024-25 ನೇ ಸಾಲಿಗೆ ಕ್ರಿಯಾಯೋಜನೆಗಳನ್ನು ರೂಪಿಸಿ ಅಂಗೀಕರಿಸುವುದು.
13) ಸಹಕಾರಿಯ ಮಾಜಿ ನಿರ್ದೇಶಕರಿಗೆ ಗೌರವ ಸಮರ್ಪಣೆ.
14) ಇತರ ವಿಷಯಗಳು ಅಧ್ಯಕ್ಷರ ಅನುಮತಿ ಮೇರೆಗೆ.

ವಂದನಾರ್ಪಣೆಯ ನಂತರ ಪ್ರಸಾದ ವ್ಯವಸ್ಥೆ ಇರುತ್ತದೆ

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸ್ಥಳ : ಬೆಂಗಳೂರು
ದಿನಾಂಕ : 20-08-2024

ಶ್ರೀ ಬಿ. ಕೆ. ಹಂಪಾಗೋಳ್
ಅಧ್ಯಕ್ಷರು

ಶ್ರೀಮತಿ ವಿನುತಾ ರೋಣದ
ಸಿಇಓ

ಸೂಚನೆಗಳು :

1. ಮಹಾಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ದಿನಾಂಕ - 09/09/2024 ರೊಳಗೆ ಸೌಹಾರ್ದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕು.
2. ರೂ.1000/- ಹಾಗೂ ಅದಕ್ಕಿಂತ ಹೆಚ್ಚು ಶೇರು ಮೊತ್ತ ಹೊಂದಿರುವ ಅರ್ಹ ಸದಸ್ಯರುಗಳು ಮಾತ್ರ ಸಭೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುತ್ತಾರೆ.
3. ಸದಸ್ಯರೆಲ್ಲರೂ ಕಡ್ಡಾಯವಾಗಿ ಸ್ಟಾಂಪ್ ಸೈಜಿನ 3 ಭಾವಚಿತ್ರಗಳನ್ನು ಹಾಗೂ ತಮ್ಮ ಇತ್ತೀಚಿನ ಮನೆ ವಿಳಾಸ, ಇ-ಮೇಲ್, ಹಾಗೂ ದೂರವಾಣಿ/ಮೊಬೈಲ್ ಸಂಖ್ಯೆ ಸಲ್ಲಿಸಲು ಕೋರಲಾಗಿದೆ.
4. ಸದಸ್ಯರು ತಪ್ಪದೇ ಸಾಮಾನ್ಯ ಸಭೆಗೆ ಭಾಗವಹಿಸಬೇಕು ಹಾಗೂ ಕನಿಷ್ಠ ವ್ಯವಹಾರ ಮಾಡಬೇಕು. ತಪ್ಪಿದಲ್ಲಿ ಚುನಾವಣೆಯಲ್ಲಿ ಭಾಗವಹಿಸುವ ಮತ್ತು ಮತದಾನ ಮಾಡುವ ಹಕ್ಕನ್ನು ಕಳೆದುಕೊಳ್ಳುತ್ತೀರಿ.